ಸೂರಬ ತಾಲ್ಲೂಕಿನಲ್ಲಿ ಕಿಡ್ಡಿಹಳ್ಳಿ ಗ್ರಾಮದ ಹತ್ತ ಪ್ಯೂಟ್ಟೇರ್ಸ್ ಸೋಸ್ತ್ರ ತೆಗದುಕೊಂಡ ಜಾಗ ಚತುರ್ಗಡಿ.

ಉತ್ತರಕ್ಕೆ—ಕಿಡ್ಡಿಹಳ್ಳಿ ಗ್ರಾಮದ ನಂಬರ್ 232ನೇ ಕೆರೆ ಮತ್ತು ಸಾಗುವಳಿ ಜಮೀನು ಸಹ.

ಪೂರ್ವಕ್ಕೆ—ಕಿಡ್ಡಿಹಳ್ಳಿ ಗ್ರಾಮದ ಸರ್ವೆ ನಂಬರ್ 62ರ ಜಾಗ ಮತ್ತು ಗ್ರಾಮ ಸಹ.

ದಕ್ಷಿಣಕ್ಕೆ—ತಾಳಗುಪ್ಪೆ ಜಂಗಲ್ ಸರ್ವೆ ನಂಬರ್ 20.

ಪಶ್ಚಿಮಕ್ಕೆ—ಕಿಡ್ಡಿಹಳ್ಳಿ ಜಂಗಲಿಯ ಸರ್ವೆ ನಂಬರ್ 2.

ಯಿನ್ನರ ಅಳತೆ 560 ಯಕರೆ.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ಸ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್ ಸೆಬ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 6.

ಬೆಂಗಳೂರಲ್ಲಿ ಇದ್ದು ಮೃತಪಟ್ಟ ವೆಂಕಟರಾವಿನ ಆಸ್ತೀ ವಿಷಯದಲ್ಲಿ—

ಅರ್ಜಿದಾರ T. M. ರಾಮಸ್ವಾಮಯ್ಯರ್, ಮೃತಪಟ್ಟ ಸದರೀ ವೆಂಕಟರಾವಿಗೆ ಅಂಣ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ T. M. ರಾಮಸ್ವಾಮಯ್ಯರ್ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ವೆಂಕಟರಾವ್ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ T. M. ರಾಮಸ್ವಾಮಯ್ಯರ್ ಅರ್ಜಿಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿವರ್ಸಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಾವಿನ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಫಿಬ್ರವರಿ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟುವೊಹರ್ ಮತ್ತುನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

1889ನೇ ಇಸವಿ ಅರ್ಜಿ ನಂಬರ್ 115.

ಕೋಲಾರದಲ್ಲಿ ಇದ್ದು ಮೃತಪಟ್ಟ ಕೋಟುಮುನಿಶಾಮಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕೋಟು ಮುನಿರವಣಪ್ಪ, ಮೃತಪಟ್ಟ ಸದರೀ ಮುನಿಶಾಮಯ್ಯನಿಗೆ ಚಿಕ್ಕತಂದೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಕೋಲಾರ ಸ್ಥಳದ ಮುನಿರವಣಪ್ಪನು ಕೋಲಾರ ವಾಸಸ್ಥರಾಗಿ ಮೃತಪಟ್ಟ ಮುನಿಶಾಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮುನಿರವಣಪ್ಪನ ಅರ್ಜಿಯನ್ನು 1889ನೇ ಇಸವಿ ಮಾರ್ಚ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿವರ್ಸಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುನಿಶಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಫಿಬ್ರವರಿ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟುವೊಹರ್ ಮತ್ತುನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

1889ನೇ ಇಸವಿ ಅರ್ಜಿ ನಂಬರ್ 151.

ದೊಡ್ಡಬಳ್ಳಾಪುರ ತಾಲ್ಲೂಕು ಮುದ್ದನಹಳ್ಳೀಲಿ ಇದ್ದು ಮೃತಪಟ್ಟ ಮುದ್ದಮ್ಮನ ಆಸ್ತಿ ವಿಷಯದಲ್ಲಿ—

ಅರ್ಜಿದಾರು 1ನೇ ದೇವೀರಮ್ಮ, ಈಕೆಮಗ 2ನೇ ನಂದಿಗಿರಿಯಪ್ಪ ಸಹ ಮೃತಪಟ್ಟ ಸದರೀ ಮುದ್ದಮ್ಮನಿಗೆ 1ನೇಯವಳು ಅಕ್ಕನು ಆಗಬೇಕೆಂಬ ಹಕ್ಕುದಾರಿ ಮೇಲೆ ಮೂಲೂರು ಸ್ಥಳದ 1ನೇ ದೇವೀರಮ್ಮ, 2ನೇ ನಂದಿಗಿರಿಯಪ್ಪ ಸಹ ಮುದ್ದೇನಹಳ್ಳಿ ವಾಸಸ್ಥರಾಗಿ ಮೃತಪಟ್ಟ ಮುದ್ದಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ್ದ ದೇವೀರಮ್ಮ, 2ನೇ ನಂದಿಗಿರಿಯಪ್ಪನ ಅರ್ಜಿಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 22ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿವರ್ಸಿಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುದ್ದಮ್ಮನ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 152.

ಬೆಂಗಳೂರು ಗೊಲ್ಲರಪೇಟೇಲಿ ಇದ್ದು ಮೃತಪಟ್ಟ ಗೊಲ್ಲರ ಚನ್ನರಾಯಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮುನಿನಾಗಪ್ಪ ಮೈನರ್, ಇವನ ಗಾರ್ಡಿಯ್ಯ ತಾಯಿ ಅಕ್ಕೆಮ್ಮ, ಮೃತಪಟ್ಟ ಸದರೀ ಚನ್ನರಾಯಪ್ಪನಿಗೆ ಮೈನರ್ ಸದರಿಯವನು ಮಗನು ಆಗಬೇಕೆಂಬ ಹಕ್ಕು ದಾರೀ ಮೇಲೆ ಬೆಂಗಳೂರು ಸ್ಥಳದ ಸದರಿ ಮುನಿನಾಗಪ್ಪನ ಗಾರ್ಡಿಯ್ಯ ಅಕ್ಕೆಮ್ಮ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಚನ್ನರಾಯಪ್ಪನ್ನಜ್ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರೇರಿಗೆ ಸರಟಿಫಿಕೇಟ್ ಬ್ಯಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತು ದಾರಳಾದ ಅಕ್ಕೆಮ್ಮನ ಅರ್ಜಿಯನ್ನು 1889ನೇ ಇಸವಿ ಮಾರ್ಚಿ ತಿಂಗಳ್ಗೆ ತಾರೀಖು 22ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನರಾಯಪ್ಪನ ಆಸ್ತಿಗೆ ಹಕ್ಕು ದಾರರಾದ ವಿನಸ್ಕರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಫಿಬ್ರವರಿ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಂ ಮತ್ತು ನಮ್ಮದಸ್ತ ಖತ್ತೊಡನೆ ಕೊಡೋಣಾಗಿದೆ.

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ದೇವಾಂಗದರಾಮಣ್ಣನ ಪ್ರಾಪರ್ಟೇಲಿರತಕ್ಕ ವೆಂಕಟರಾವು ವಿಷಯದಲ್ಲಿ—

ಸ್ಯ 1888ನೇ ಇಸವಿ ದಿವಾಳಿ ಕೇಸ್ ನಂಬರ್ 944.

ಹುಕ್ಕುಂ.

ಮೇಲ್ಕಂಡ ವೆಂಕಟರಾವು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜೀರಾದ ಮೆ॥ ಪಿ. ಕೈಸ್ ಸಾಹೆಬರವರ ರೂಬರೂ ಅರ್ಜೀದಾರನಾದ ವೆಂಕಟರಾವು ಖುದ್ದಾಗಿಯು ಮತ್ತು ಸದರೀಯವನ ಲೇಣೇದಾರ್ರಾದ 1ನೇ ಯವರ ತರಫಿ ಪ್ಲೀಡರ್ ಗಂಗಾಧರಯ್ಯನವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ 2—3—4ನೇರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ವೆಂಕಟರಾವು ಹೊಂದುವದಕ್ಕೆ ಹಕ್ಕು ದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಿಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗೀರೀಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬುದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1889ನೇ ಇಸವಿ ಜನವರಿ 18ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನೀಂ ನಮ್ಮದಸ್ತ ಖತ್ತೊಡನೇ ಕೊಡೋಣಾಗಿದೆ.

ಸಾಲಪಟ್ಟಿ.

ನಂಬರ್.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಜೊಬಲಗ.	ಯಾವಾಗ ದೇಣೇ ಹುಟ್ಟಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಟಿಪ್ಪಣಿ.
1	ಬೆಂಗಳೂರು ತೆಲಗರಪ್ಯಾಟೇಲಿರತಕ್ಕ ಜಗೆ ನಂಜಂಡಪ್ಪ	166 2 0	1888	ಬೆಂಗಳೂರು ಮುನೀಫ್ ಕೋರ್ಟ್‌ಅರಿಜಿನಲ್ 156ನೇ ಡಿಕ್ರಿ ಬಾ॥	
2	ಡಿಟೋ ನಗರ್ತರ ಪ್ಯಾಟೇ ಚಿಕ್ಕ ಪುಟ್ಟಣ್ಣ	100 0 0	1887	ಡಿಟೋ 387ನೇ ಡಿಕ್ರಿ ಬಾಬತು	
3	ಡಿಟೋ ಕಮರ್ಷಿಯಲ್ ಬ್ಯಾಂಕು	135 13 0	1883	ಬೆಂಗಳೂರ ಸಬ್‌ಕೋರ್ಟು ಸ್ಮಾ॥ 180ನೇ ಡಿಕ್ರಿ ಬಾಬತು ಪ್ರಾಂಸರಿ ಬಾಬತು	
4	ಡಿಟೋ ಹಿಂದೂ ಬ್ಯಾಂಕು	140 0 0	..		
	ಜುಮ್ಲಾ ..	541 15 0	..		

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ಆಕ್ಟೇರಿಯತಕ್ಕ ಲಕ್ಷ್ಮಣಚಿಂಗರ ಮಗ ಶೇತಾರಾಮುಚಿಂಗರ ವಿಷಯದಲ್ಲಿ—

ಸ್ಯ 1888ನೇ ಇಸವಿ ದಿವಾಳೀ ಕೇಸ್ ನಂಬರು 958.

ಹುಕುಂ.

ಮೇಲ್ಕಂಡ ಶೇತಾರಾಮುಚಿಂಗನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜೀರಾದ ಮೆ॥ ಸಿ. ಕೈಸ್ ಸಾಹೆಬರವರ ರೂಬರೂ ಅರ್ಜೀದಾರನಾದ ಶೇತರಾಮುಚಿಂಗನು ಖುದ್ದಾಗಿಯೂ ಮತ್ತು ಸದರೀಯವನ ಲೇಣೇದಾರ್ರಾದ 1—2ನೇ ಯವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು) ತಮಗೆ ಈ ದರ್ಖಾಸ್ತ್ರೀ ನೋಟಿಸ್ಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ–3–4–5–6–7–8–9–10ನೇಯವರು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಇನ್ಯಾಕಯ್ಯನಿಗು ಹೊಂದುವದಕ್ಕೆ ಹಕ್ಕು ದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ವತ್ತಿಗೆ ವ್ಯಾಜ್ಯವಾಗಿಯಾಗಲಿ ದಸ್ತಗಿರಿ ವ್ಯಾಜ್ಯವಾಗಲಿ ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸಿ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1889ನೇ ಇಸವಿ ಜನವರಿ 18ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತಿನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರು) ಅಥವಾ ದಾವಾದಾರ) ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣಿ ಕೊಟ್ಟದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಯಿದ್ದರೆ.	ಷರಾ.
1	ಬೆಂಗಳೂರು ಹಿಂದೂ ಬ್ಯಾಂಕ್ ..	58 0 0	1888 ಜಾರಿ	ಡಿಕರಿ ಬಾಬತು	
2	ಬೆಂಗಳೂರು ಕಿದ್ವೀಕಟ್ಟೇಲಿರುವ ಪಾಣ್ಯದ ರಾಘವೇಂದ್ರಪ್ಪ	90 0 0 15 0 0	..	ತಪಸೀಲ್ ಯಿಲ್ಲ	
3	ಡಿಟೋ ಚಿಕ್ಕಪೇಟೇಲಿರುವ ಕಟ್ಟೂರು ಕೃಷ್ಣಯ್ಯಂಗಾರ್ರು	55 0 0	..	ಪ್ಯಾಂಸರಿ ಬಾಬತು	
4	ಬೆಂಗಳೂರು ತಾಲ್ಲೂಕು ಕಬ್ಬೇರಿ ರೋಡಿನಲ್ಲಿರುವ ಕುಂಭಕೋಣದ ರಘುನಾಥರಾವ್ ..	24 8 0	..	ಜವಳಿ ಬಗೆ	
5	ಬೆಂಗಳೂರು ಕಮರ್ಷಿಯಲ್ ಬ್ಯಾಂಕ್ ..	250 0 0 90 0 0 60 0 0	..	ಡಿಕರಿ ಬಾಬತು	
6	ಕುಂಬಾರಪೇಟೇಲಿರುವ ದೇವಂಡಹಳ್ಳಿ ವೆಂಕಟರಮಣಪ್ಪ	20 0 0	..	ಡಿಕರಿ ಬಗೆ	
7	ಡಿಟೋ ರಾಣಾಬಿಂಗನಪೇಟೇಲಿರುವ ನೇಗೆ ಕೃಷ್ಣಪ್ಪನ ಹೆಂಡತಿ ಹುಚ್ಚವ್ವ ..	12 0 0	..	ತಪಸೀಲ್ ಯಿಲ್ಲ	
8	ಡಿಟೋ ಮಹರಾಷ್ಟ್ರ ಬ್ಯಾಂಕಿಗೆ ..	5 0 0 20 0 0	..	ಡಿಕರಿ ಬಗೆ	
9	ಡಿಟೋ ಜವಳಿ ಅಂಗಡಿ ಬೊಪ್ಪಣ ..	15 0 0 6 0 0	..	ತಪಸೀಲ್ ಯಿಲ್ಲ	
10	ನಗರ್ತಪೇಟೆ ಸಂಪನ್ನಯ್ಯನವರ ನಂಜುಂಡಪ್ಪ	15 0 0	...	ಡಿಕರಿ ಬಾಬತು	
	ಜುಮ್ಲಾ	735 0 0			

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ಕಬ್ಬರ್ಪೇಟೆಯ ವ್ಯಾಪಾರಿ ಇನ್ಯಾಕಯ್ಯನ ವಿಷಯದಲ್ಲಿ—

ಸ್ಯ 1888ನೇ ಇಸವಿ ದಿವಾಳಿ ಕೇಸ್ ನಂಬರ್ 975.

ಹುಕುಂ.

ಮೇಲ್ಕಂಡ ಇನ್ಯಾಕಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜೀರಾದ ಮೆ|| ಸಿ. ಕೈಸ್ ಸಾಹೆಬರವರ ರೂಬರೂ ಅರ್ಜೀದಾರನಾದ ಇನ್ಯಾಕಯ್ಯನ್ನ ಖುದ್ದಾಗಿಯೂ ಮತ್ತು ಸದರೀಯವನ ಲೇಣೇದಾರ್ರಾದ 1–2–3ನೇಯವರಿಗೂ ದರ್ಖಾಸ್ತ್ರೀ ಮಾಡಲ್ಪಟ್ಟಿತು.

ಯಲ್ಲರೂ ಹಾಜರು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಇನ್ಯಾಕಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ. ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ವತ್ತಿಗೀ ವ್ಯಾಜ್ಯವಾಗಿಯಾಗಲಿ ದಸ್ತಗಿರೀ ವ್ಯಾಜ್ಯವಾಗಲಿ ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸಿ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1889ನೇ ಇಸವಿ ಜನವರಿ 21ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತಿನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೀದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹ್ಹಾಲಿ ತೀರ್ಯ ಬಂದ ಅವರುಗಳ ವಾಸಸ್ಥಳ.	ಸೊಬಲಗು.	ಯಾವಾಗ ಬೇಕೋ ಆಗ ತೀರ್ಚಬಹುದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಬೆಂಗಳೂರು ಕಬ್ಬಾಪೇಟೇಲಿರತಕ್ಕ ಇನ್ನಯ್ಯ ಕಯ್ಯ	18 9 6		ತಪಶೀಲ್ ಇಲ್ಲ	
2	ಡಿಟೋ ತಿರ್ಪಯ್ಯ	50 0 0		ಡಿಟೋ	
3	ಡಿಟೋ ಲಕ್ಷ್ಮೀದೇವಮ್ಮ ಪೆರಫ ವೆಲಸತವ್ಮ	200 0 0		ಡಿಟೋ	
	ಜುಮ್ಲಾ	268 9 6			

ಸಿ. ಕ್ರೈಸ್,
ಸಬ್ ಜಡ್ಜ್.

ತಾರೀಖು 11ನೇ ಫಿಬ್ರವರಿ 1889.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರು ಡಿಸ್ಟ್ರಿಕ್ಟು ಜಂಗಲ್‌ಗಳಲ್ಲಿ ಅಂದರೆ ಸರ್ಕಾರದ ಮತ್ತು ಫಾರೆಸ್ಟ್ ಇಲಾಖೇ ಸಂಬಂಧಪಟ್ಟ ಯಲ್ಲ ಜಂಗಲ್‌ಗಳಲ್ಲಿಯೂ 1889ನೇ ಇಸವಿ ಏಪ್ರೆಲ್ ಗುರ್ಯೇ ಲಾಗಾಯತು 1892ನೇ ಇಸವಿ ಮಾರ್ಚೀ ಆಖೈರು ವರಗೆ ಆಗುವ ಮೂರು ಸಾಲ್‌ಗಳಲ್ಲಿಯೂ ಲಾಕ್ (ಅರಗು) ರೂಢಿಸಲು ಪಬ್ಲಿಕ್ ಆಕ್ಷರ್ ಮೂಲಕ ಬೆಂಗಳೂರು ಡಿಸ್ಟ್ರಿಕ್ಟು ಆಫೀಸಿನಲ್ಲಿ 1889ನೇ ಇಸವಿ ಮಾರ್ಚೀ ತಾರೀಖು 13ನೇ ಬುಧವಾರ ಬೆಳಗ್ಯೆ 12 ಘಂಟೆಗೆ ಮಾರಲ್ಪಡುತ್ತೆ.

2. ಹರಾಜು ಮಂಜೂರುಮಾಡಲ್ಪಟ್ಟ ಜಡ ನವಾಲ್‌ದಾರನು ಮಂಜೂರಾದ ಕೂಡ್ಲೆ ನೋಟೆಗಳ ಮೂಲಕ ಆಗಲಿ ರೊಕ್ಕದಲ್ಲಿ ಆಗಲಿ ಮೂರು ವರುಷದ ಹರಾಜು ಮೊಬಲಗು ಪೈಕಿ 6 ತಿಂಗಳ ಖಿಸ್ತು ಮೊಬಲಗು ಡಿಪಾಜಿಟ್ಟು ಕಟ್ಟತಕ್ಕದ್ದು. ಸದರೀ ಖಿಸ್ತು ಅಂದರೆ ಒಂದು ವರುಷದ ಹಣದಲ್ಲಿ 12ರಲ್ಲಿ ಒಂದುಭಾಗ ಅಥವಾ 3 ವರುಷದ ಹಣದಲ್ಲಿ 36ರಲ್ಲಿ ಒಂದುಭಾಗ ಹೀಗೆ ಆಗುವ 6 ತಿಂಗಳ ಖಿಸ್ತು ಕಟ್ಟಲು ಕಂಟ್ರಾಕ್ಟುದಾರನು ತಪ್ಪಿದಲ್ಲಿ ಕಂಟ್ರಾಕ್ಟುದಾರನ ಜವಾಬುದಾರಿ ಮೇಲೆ ಕಂಟ್ರಾಕ್ಟು ಪುನಃ ಮಾರಲ್ಪಡುತ್ತೆ. ಇದರಿಂದ ಯೀನಾದರು ನಷ್ಟ ಸಂಭವಿಸಿದಲ್ಲಿ ಆ ನಷ್ಟಕ್ಕೆ ಕಂಟ್ರಾಕ್ಟುದಾರನೆ ಜವಾಬು ಮಾಡತಕ್ಕದ್ದು. ಮತ್ತು ಉಂಟಾಗುವ ನಷ್ಟ ರೆವಿನ್ಯೂ ದಿವ್ಯೂಂಡಿನಂತೆ ಸದರೀಯವನಿಂದಲೇ ವಸೂಲ್ಮಾಡಲ್ಪಡುತ್ತೆ.

3. ಮಂಜೂರ್ಮಾಡಲ್ಪಟ್ಟ ಕಂಟ್ರಾಕ್ಟುದಾರನು 1889ನೇ ಇಸವಿ ಏಪ್ರೆಲ್ ಗುರ್ಯೇ ಲಾಗಾಯತು ಬಾಬು ರೂಢಿಸಲು ತನ್ನ ಕಂಟ್ರಾಕ್ಟು ಜಾರಿಯಲ್ಲಿ ತರಬಹುದು. ಡಿಪಾಜಿಟ್ಟು ಆರು ತಿಂಗಳ ಖಿಸ್ತು ವಿನಹ ಪ್ರತಿ ತಿಂಗಳಲ್ಲಿಯು ಖಿಸ್ತು ಸಲ್ಲಿಸಬೇಕು, ಮೊದಲು ತಿಂಗಳ ಖಿಸ್ತು 1889ನೇ ಮೆ 15ರ ವಳಗಾಗಿ ಪಾವತಿ ಮಾಡಬೇಕು ನಂತರ ಪ್ರತಿ ಮಾಹೆಖಿಸ್ತು ಮುಂದಿನ ಮಾಹೆ 15ನೇ ತಾರೀಖು ವಳಗಾಗಿ ಕೊಡುತ್ತಾ ಬರಬೇಕು. ಡಿಪಾಜಿಟ್ಟು ಕಟ್ಟಿರುವ 6 ತಿಂಗಳ ಖಿಸ್ತು ಕಂಟ್ರಾಕ್ಟು ಮುಗಿಯುವ ಆಖೈರು 6 ತಿಂಗಳ ಖಿಸ್ತಿಗೆ ವಜಾ ಮಾಡಲ್ಪಡುತ್ತೆ.

4. ರೂಲ್ಸ್ ಮೇರೆ ಜಾರಿಯಲ್ಲಿರುವ ಲೋಕಲ್‌ಸೆಸ್ ಮೊಬಲಗು ಪ್ರತಿ ಮಾಹೆ ಖಿಸ್ತು ಮೊಬಲಗಿನ ಮೇಲೆ ಆಗುವದನ್ನು ಸಹ ಕಂಟ್ರಾಕ್ಟುದಾರನು ಕೊಡಬೇಕು.

5. ಕೇರಿದಂತೆ ಯರಡು ಮಾಹೆಗಳ ಖಿಸ್ತು ಮೊಬಲಗು ವಸೂಲ್ ಆಗದೆ ಯಿದ್ದರೆ ಮತ್ತು ಜಂಗಲಿ ಸಂರಕ್ಷಣೆ ಸಂಬಂಧವಾದ ನಿಗಾವಣೆ ವಿಷಯದಲ್ಲಿ ಹ್ಯಾಗೆ ನಡಕೊಳ್ಳಬೇಕೂ ಆ ನಿಬಂಧನೆಗಳಿಗೆ ವಿರೋಧವಾಗಿ ಕಂಟ್ರಾಕ್ಟುದಾರ ನಡದುಕೊಂಡರೂ ಕಂಟ್ರಾಕ್ಟು ಕೂಡ್ಲೆ ಬಿಗ ಹಕರಾರ್ ರದ್ದುಮಾಡಲ್ಪಡುತ್ತೆ. ಇದರಿಂದ ಸಂಭವಿಸುವ ನಷ್ಟಕ್ಕೆ ಕಂಟ್ರಾಕ್ಟುದಾರನ್ನೆ ಗುರಿಮಾಡಲ್ಪಡುವದಲ್ಲದೆ ಕಂಟ್ರಾಕ್ಟು ಪುನಹ ಮಾರಲ್ಪಟ್ಟು ಯಿದರ ನಷ್ಟಕ್ಕೆ ಮೊದಲ್ ಕಂಟ್ರಾಕ್ಟುದಾರನ್ನ ಗುರಿಮಾಡಲ್ಪಡುತ್ತೆ. ಮತ್ತು ಯಿವನು ಮೊದಲು ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ಜಪ್ತಗದುಕೊಳ್ಳಲ್ಪಡುತ್ತೆ.

ಎ. ಹೆಚ್. ಮೆಕ್ಕಿಗಟ್ಟೈರ್,
ಡೆಪ್ಯೂಟಿ ಕಮ್ಮಿಷನರ್.